Study Tour made by the Planning Commission's Fact Finding Team.

*Q.—460. Sri S. RAJAGOPAL (K. G. F).—

Will the Government be pleased to state :—

(*a*) whether it is a fact that the Planning Commission's fact finding team toured the Districts of Chitradurga, Tumkur, Kolar to assess the distress conditions in those areas ;

(*b*) if so, the details of the study made ?

A.—Sri M. V. KRISHNAPPA (Minister for Revenue).—

(*a*) Yes.

(*b*) No report has so far been received by the State Gcvernment.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರದಲ್ಲಿ ವರದಿ ಬಂದಿಲ್ಲ ಎಂದು ಹೇಳಿದ್ದೀರಿ. ಅನಧಿಕೃತವಾಗಿ ಅವರೊಡನೆ ಮಾತನಾಡಿ, ಅವರು ಎಲ್ಲೆಲ್ಲಿ ಹೋಗಿದ್ದಾರೆ ಎಂಬುದು ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಎಲ್ಲೆಲ್ಲಿ ಟೂರ್ ಮಾಡಬೇಕೆಂದು ನಾವು ಏರ್ಪಾಡು ಮಾಡಿದ್ದೆವು. ಅವರು ಏನೇನು ವಿಷಯ ನೋಡಿದ್ದಾರೆ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ವರದಿಗಳಲ್ಲಿ ಒಪ್ಪಿಸಿದ್ದಾರೆ. ನಮಗೆ ಅದು ಗೊತ್ತಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಅವರು ಪೇಪರಿನವರಿಗೆ ಇಂಟರ್‌ವ್ಯೂ ಕೊಟ್ಟ ಹಾಗೆ ಇದೆ, ಹೀಗೆ ಇದೆ ಎಂದು ಹೇಳಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀ ಯಾರ್ಡಿಯವರು ಆಫೀಸರುಗಳ ಸಂಗಡ ಮೈಸೂರು ಸಂಸ್ಥಾನದಲ್ಲಿ ಮೂರು ದಿನ ಟೂರ್ ಮಾಡಿದ್ದರು. ಆಫೀಸರುಗಳೊಡನೆ ಚರ್ಚೆ ಇಟ್ಟುಕೊಂಡಿದ್ದರು. ಅದರಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಬೇರೇನೂ ಗೊತ್ತಿಲ್ಲ.

Sri S. RAJAGOPAL.—May I know whether on behalf of our Government any detailed report was submitted to the study team ?

Sri M. V. KRISHNAPPA.—The team came here and along with the team our officers were there—the Revenue Secretary and the Secretary in charge of relief. After they returned they had a meeting with all the concerned officers in the Secretariat. We have given them all the necessary information they asked for.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಯಾರ್ಡಿಯವರು ಬಂದು, ಯಾವ ಯಾವ ಟಿ. ಬಿ. ಗಳಲ್ಲಿದ್ದರು, ಯಾವ ಯಾವ ಮೈನ್ ರೋಡುಗಳಲ್ಲಿ ಹೋಗಿದ್ದರು, ಯಾವ ಯಾವ ಹಳ್ಳಿಗಳಿಗೆ ಕಾಲು ದಾರಿಯಾಗಿ ಯಾವ ಯಾವ ಗ್ರಾಮಗಳಿಗೆ ಅವರನ್ನು ಕರಕೊಂಡು ಹೋಗಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀ ಯಾರ್ಡಿಯವರು ಮೊದಲನೆಯ ದಿವಸ ಬೆಂಗಳೂರಿನಿಂದ ಹೊರಟು, ಕೋಲಾರ ಜಿಲ್ಲೆಯ ತೊಂಡೆಬಾವಿಯಿಂದಾಗಿ ಅಲ್ಲಿ ಹಳ್ಳಿಗಳಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ನೋಡಿದರು. ಅಲ್ಲಿಂದ ನೇರವಾಗಿ ಹಿರಿಯೂರು ಮಾರ್ಗವಾಗಿ ಚಿತ್ರದುರ್ಗಕ್ಕೆ ಹೋಗಿ, ಅಲ್ಲಲ್ಲಿ ಸರ್ಕಾರದವರು ಪ್ರೋಗ್ರಾಂ ಹಾಕಿಕೊಂಡಿದ್ದ ಕೆಲಸಗಳನ್ನು ನೋಡಿದ್ದಾರೆ. 2ನೇ ದಿನ ಕುಣಿಗಲ್ ಆಗಿ ಕೃಷ್ಣರಾಜಪೇಟೆ ನೋಡಿಕೊಂಡು, 3ನೇ ದಿನ ಮೈಸೂರು ಜಿಲ್ಲೆಯ ಕೆಲವು ಭಾಗಗಳನ್ನು ನೋಡಿದರು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೇಂದ್ರ ಸರ್ಕಾರದ ತಂಡದವರು ಬಂದಿದ್ದಾಗ ಅವರ ಜೊತೆಗೆ ರಾಜ್ಯ ಸರ್ಕಾರದ ಮಂತ್ರಿಗಳು ಯಾರಾದರೂ ಪ್ರವಾಸ ಮಾಡಿದ್ದಾರೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಂಬಂಧಪಟ್ಟ ಇಲಾಖೆಯ ಸೆಕ್ರೆಟರಿಗಳು ಹೋಗಿದ್ದರು.

ಶ್ರೀ ಎಸ್. ಶಿವಪ್ಪ.—ಯಾರಡಿ ಸಮಿತಿಯವರು ತಮ್ಮ ಪ್ರವಾಸದಲ್ಲಿ ಹಾಸನ ಜಿಲ್ಲೆಗೆ ಮೊದಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ಹಠಾತ್ತನೆ ಪ್ರವಾಸದ ಕಾರ್ಯಕ್ರಮವನ್ನು ರದ್ದು ಪಡಿಸಿದುದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರಿಗೆ ಹೇಳಿದಂತೆ ಕೆಲವು ಹಳ್ಳಿಗಳಿಗೆ ಕರೆದುಕೊಂಡು ಹೋಗಿದ್ದು, ಕೆಲವು ಒಳನಾಡು ಪ್ರದೇಶಗಳಿಗೂ ಕರೆದುಕೊಂಡು ಹೋದುದರಿಂದ ಹೊತ್ತು ಮೀರಿ ಪ್ರವಾಸವನ್ನು ರದ್ದು ಮಾಡಿರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ತಂಡದವರು ತುಮಕೂರು ಜಿಲ್ಲೆಗೆ ಬಂದಾಗ ನಾನೂ ಅವರ ಜೊತೆಯಲ್ಲಿದ್ದೆ ಅವರು ಪತ್ರಿಕಾಕರ್ತರ ಸಂಗಡ ಮಾತನಾಡುತ್ತ ನಾಲ್ಕು ಲಕ್ಷ ಜನರಿಗೆ ಮಾತ್ರ ಅಫೆಕ್ಟ್ ಆಗಿದೆ, ಮೈಸೂರು ರಾಜ್ಯಕ್ಕಿಂತಲೂ ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಪರಿಸ್ಥಿತಿ ತುಂಬಾ ಕೆಟ್ಟಿದೆ ಎಂದು ಹೇಳಿದರು. ಮಾನ್ಯ ಕಂದಾಯ ಸಚಿವರು ಮತ್ತು ಆಹಾರ ಸಚಿವರು ಮೇಲ್ಮನೆಯಲ್ಲಿ ಮಾತನಾಡುವಾಗ 75 ಲಕ್ಷಕ್ಕಿಂತಲೂ ಹೆಚ್ಚು ಜನ ಅಭಾವಕ್ಕೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ. ಈ ತಂಡದವರು ಪತ್ರಕರ್ತರ ಸಂಗಡ ಮಾತನಾಡುವಾಗ ಮೈಸೂರಿನ ಅಧಿಕಾರಿಗಳೂ ಸಹ ಇದ್ದರು. ಅಧಿಕಾರಿಗಳ ರಿಪೋರ್ಟ್ ಮತ್ತು ಶ್ರೀ ಯಾರಡಿ ಅವರ ರಿಪೋರ್ಟ್, ಎರಡನ್ನೂ ಇಟ್ಟುಕೊಂಡು ಕೇಂದ್ರದಿಂದ ಧನ ಸಹಾಯ ಪಡೆಯುತ್ತೀರೋ ಅಥವಾ ಅವರು ಕೊಡದಿದ್ದರೆ ನಮ್ಮ ಅಧಿಕಾರಿಗಳು ಕೊಟ್ಟ ರಿಪೋರ್ಟಿನ ಮೇಲೆ ಅಭಾವ ಪೀಡಿತ ಪ್ರದೇಶಗಳಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮಲ್ಲಿ ಅಭಾವ ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಪ್ರಾರಂಭವಾದಾಗಿನಿಂದಲೂ ಮಾನ್ಯ ಸಭೆಗೆ ಅಭಾವ ಪರಿಸ್ಥಿತಿ ಮತ್ತು ಅಭಾವದ ಗಾತ್ರ ಎಷ್ಟು ಎನ್ನುವ ವಿಷಯವನ್ನು ಹೇಳಿದ್ದೇವೆ. ಯಾರಡಿಯವರು ಪತ್ರಕರ್ತರ ಸಂಗಡ ಮಾತನಾಡಿದಾಗ ಹೇಳಿದ ಕೆಲವು ಮಾತುಗಳನ್ನು ಆಧಾರವಾಗಿ ಇಟ್ಟುಕೊಂಡು ಅವರ ರಿಪೋರ್ಟ್ ಏನು ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಐ. ಸಿ. ಎಸ್. ಅಧಿಕಾರಿಗಳು. ಅವರು ರಾಜ್ಯದಲ್ಲಿ ಕೆಲವು ಭಾಗಗಳನ್ನು ನೋಡಿ ಸಂಬಂಧಪಟ್ಟ ಇರಾಖಾ ಅಧಿಕಾರಿಗಳ ಜೊತೆ ಮಾತನಾಡಿದ್ದಾರೆ. ಅವರ ರಿಪೋರ್ಟ್ ಬರುವವರೆಗೂ ನಾವು ಮಾತನಾಡದೆ ಇರುವುದು ಉತ್ತಮ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ತಂಡದವರು ತುಮಕೂರು ಜಿಲ್ಲೆಯ ಪ್ರವಾಸಕ್ಕೆ ಬಂದಾಗ ರಾತ್ರಿ 8 ಗಂಟೆಯಾಗಿತ್ತು. ಅವರು ಹೋದ ಗ್ರಾಮಗಳಲ್ಲಿ ಲೈಟುಗಳಿರಲಿಲ್ಲ. ಯಾವ ಬಡ ರೈತನ ಮುಖ ನೋಡಿ ಅಥವಾ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅವರು ರಿಪೋರ್ಟ್ ಕಳಿಸುತ್ತಾರೆ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರು ಈ ತಂಡದವರು ಹಳ್ಳಿಗಳಿಗೆ ಹೋಗಿದ್ದರೇ ಎಂದು ಕೇಳಿದರು; ಲೈಟ್ ಇಲ್ಲದೆ ಇರುವ ಹಳ್ಳಿಗಳಿಗೂ ಅವರು ಹೋಗಿದ್ದರು, ಬಹಳ ಹಿಂದುಳಿದ ಪ್ರದೇಶಗಳಿಗೂ ಹೋಗಿದ್ದರು ಎಂದು ನೀವು ಹೇಳುವುದರಿಂದ ಗೊತ್ತಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ತಂಡದವರ ಜೊತೆಗೆ ಅಧಿಕಾರಿಗಳು ಹೋಗಿದ್ದರು ಎಂದು ಹೇಳಿದರು. ಅಧಿಕಾರಿಗಳು ಸರ್ಕಾರಕ್ಕೆ ಏನಾದರೂ ರಿಪೋರ್ಟ್ ಕೊಟ್ಟಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಿಪೋರ್ಟ್ ಕೊಡಬೇಕಾದವರು ತಂಡದವರು. ನಮ್ಮ ಅಧಿಕಾರಿಗಳೊಡನೆ ನಾವು ಪ್ರತಿದಿನವೂ ಮಾತನಾಡುತ್ತಿರುತ್ತೇವೆ. ಅವರು ನಮಗೆ ರಿಪೋರ್ಟ್ ಒಪ್ಪಿಸಬೇಕಾಗಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ತಂಡದವರ ರಿಪೋರ್ಟ್ ಎಂದು ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಸಂಸ್ಥಾನಗಳಲ್ಲಿ ಅಭಾವ ಬಂದರೆ ಅವರಿಗೆ ಆಹಾರದ ಮತ್ತು ಹಣದ ಸಹಾಯ ಮಾಡುವವರು ವ್ಯವಸಾಯ ಇರಾಖೆಯವರು. ಈ ತಂಡದವರನ್ನು ಪ್ಲಾನಿಂಗ್ ಕಮಿಷನ್ ಪರವಾಗಿ ಕಳುಹಿಸಿದ್ದರು. ನಾವು ಕೇಂದ್ರವನ್ನು ಹತ್ತು ಕೋಟಿ ರೂಪಾಯಿ ಮತ್ತು 9 ಲಕ್ಷ ಟನ್ ಆಹಾರ ಬೇಕಾಗುತ್ತದೆ ಎಂದು ಕೇಳಿದೆವು. ಅವರು ತಕ್ಷಣ ಒಂದು ಕೋಟಿ ರೂಪಾಯಿ ಕೊಟ್ಟು ಮಿಕ್ಕದ್ದನ್ನು ನಮ್ಮ ತಂಡ ರಾಜ್ಯಕ್ಕೆ ಬಂದು ಅಲ್ಲಿನ ಪರಿಸ್ಥಿತಿಯನ್ನೆಲ್ಲ ನೋಡಿಕೊಂಡು ಬಂದು ಮೈಸೂರು ರಾಜ್ಯಕ್ಕೆ ಎಷ್ಟು ಸಹಾಯವನ್ನು ಯಾವರೀತಿ ಕೊಡಬೇಕೆಂದು ಹೇಳುವುದರ ಮೇಲೆ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು. ಆ ಪ್ರಕಾರವಾಗಿ ಈ ತಂಡದವರು ಬಂದು ಹೋಗಿದ್ದಾರೆ. ಅವರು ರಿಪೋರ್ಟ್ ಕೊಟ್ಟ ಮೇಲೆ ನಮಗೆ ಏನು ಸಹಾಯ ಕೊಡುತ್ತಾರೆಂದು ಹೇಳುವುದಕ್ಕಾಗುತ್ತದೆ.

Mr. SPEAKER.—It is a very important matter and Members would like to know what the report is. Cannot the Government write and get the report ?

Sri M. V. KRISHNAPPA.—When the report is submitted, the Government of India will send us a copy to us also. Otherwise, we will write and get a copy of the same.

Mr. SPEAKER.—Members should not be left in an unhappy state of mind.

Sri M. V. KRISHNAPPA.—Unfortunately, there is some sort of apprehension, because of the Press Interview, which has created the scare in the minds of a number of people. However, we will write to them.

ಶ್ರೀ ಸಿದ್ದಯ್ಯ ಕಾಶಿಮಠ.—ಈ ತಂಡದವರು ಅಭಾವಪೀಡಿತ ಪ್ರದೇಶಗಳನ್ನು ಪರಿಶೀಲಿಸುವುದಕ್ಕೆ ಮತ್ತೊಮ್ಮೆ ಬರುವುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬರಬೇಕಾದ ಪ್ರಮೇಯವಿಲ್ಲ. ಅವರು ಈಗಾಗಲೇ ನೋಡಿ ಕೊಂಡು ಹೋಗಿದ್ದಾರೆ. ಅವರು ರಿಪೋರ್ಟ್ ಇನ್ನೂ ಕೊಟ್ಟಿಲ್ಲ. ಮಾನ್ಯ ಅಧ್ಯಕ್ಷರು ಹೇಳಿದಂತೆ ನಾವೂ ಅವರಿಗೆ ಬರೆಯುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಕ್ಚುಯರ್ ಅಸೆಸ್‌ಮೆಂಟ್ ಪ್ರಕಾರ ಎಷ್ಟು ಜಿಲ್ಲೆಗಳು ಮತ್ತು ಎಷ್ಟು ಲಕ್ಷ ಜನರು ಅಭಾವಕ್ಕೆ ಒಳಗಾಗಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಯಾರಡಿ ಕಮಿಟಿಯವರ ರಿಪೋರ್ಟಿಗೆ ಸಂಬಂಧಪಟ್ಟ ವಿಷಯ. ಮಾನ್ಯ ಸದಸ್ಯರು ಕೇಳುವ ವಿಷಯಕ್ಕೆ ಬೇರೆ ಪ್ರಶ್ನೆಯನ್ನು ಹಾಕಿದರೆ ಹೇಳಬಹುದು. ಇದು ಬಹಳ ಗಹನವಾದ ವಿಷಯವಾದುದರಿಂದ 'ಆಫ್ ಹ್ಯಾಂಡ್' ಆಗಿ ಹೇಳುವುದಕ್ಕಿಂತಲೂ ವಿವರಗಳನ್ನು ತರಿಸಿ ಹೇಳುವುದು ಉತ್ತಮ. ಆದರೂ ನನಗೆ ಜ್ಞಾಪಕವಿರುವಷ್ಟನ್ನು ಹೇಳುತ್ತೇನೆ. ನಾವು 10 ಕೋಟಿ ರೂಪಾಯಿ ಬೇಕು ಎಂದು ಕೇಳಿದೆವು. ಸಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ 50 ಲಕ್ಷ ಜನಗಳಿಗೆ ಈ ರಾಜ್ಯದಲ್ಲಿ ಕೆಲಸ ಕೊಡಬೇಕಾದ ಪರಿಸ್ಥಿತಿ ಬರಬಹುದು ಎಂದು ಹೇಳಿದೆವು. ಆದರೆ ಡಿಸೆಂಬರ್ ತಿಂಗಳಿನಲ್ಲಿ ಸ್ವಲ್ಪ ಮಳೆ ಬಂದು ಪರಿಸ್ಥಿತಿ ಸುಧಾರಿಸಿತು. ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಸ್ವಲ್ಪ ಸುಧಾರಣೆಯಾಯಿತು. ದಕ್ಷಿಣದ ಕೆಲವು ಭಾಗಗಳಲ್ಲಿಯೂ ಪರಿಸ್ಥಿತಿ ಸುಧಾರಿಸಿತು. ಪೀಕ್ ಪೀರಿಯಡ್ಡಿನಲ್ಲಿ 16-17 ಲಕ್ಷ ಜನಗಳಿಗೆ ಕೆಲಸ ಕೊಡಬೇಕಾಗಿ ಬರ ಬಹುದು ಎಂದು ಅಂದುಕೊಂಡಿದ್ದೆವು. ಯಾರಡಿ ತಂಡದವರು ಖಚಿತವಾಗಿ ಏನೂ ಹೇಳಿಲ್ಲ. ನಾಲ್ಕು ಲಕ್ಷ ಎಂದು ಹೇಳಿದರೆಂಬುದಾಗಿ ಅದರ ಮೇಲೆ ವಾಗ್ಯುದ್ಧ ಮಾಡುವುದಕ್ಕಿಂತಲೂ ಅವರ ರಿಪೋರ್ಟ್ ತರಿಸಿಕೊಂಡು ಅದರ ಮೇಲೆ ಚರ್ಚೆಮಾಡುವುದು ಉತ್ತಮ.

ಶ್ರೀ ಬಿ. ವಿ. ಮಾಗಾವಿ.—ಯಾರಡಿ ಕಮಿಷನ್‌ನವರು ಬೆಳಗಾಂ ಡಿವಿಜನ್ನಿನಲ್ಲಿ ಅನೇಕ ಕಡೆ ಅಭಾವ ಪರಿಸ್ಥಿತಿ ಇದ್ದರೂ ಕೂಡ್ಲತಮ್ಮ ಕಾರ್ಯಕ್ರಮವನ್ನು ಅಲ್ಲಿ ಇಟ್ಟುಕೊಳ್ಳದೆ ಮೈಸೂರು ವಿಭಾಗದಲ್ಲಿ ಅಷ್ಟೇ ನೋಡಿಕೊಂಡು ಹೋಗಿದ್ದಾರೆ. ಅದರಿಂದ ಎಲ್ಲ ಸ್ಥಳಗಳಿಗೂ ಭೇಟಿಕೊಟ್ಟು ಪರಿಸ್ಥಿ ಯನ್ನು ನೋಡಿದ ಹಾಗೆ ಆಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಎಲ್ಲ ಸ್ಥಳಗಳನ್ನೂ ನೋಡಬೇಕಾದ್ದಿಲ್ಲ; ಎಲ್ಲ ಸ್ಥಳಗಳನ್ನೂ ನೋಡಿಕೊಂಡು ಹೋಗುವುದಕ್ಕಾಗುವುದಿಲ್ಲ. ಅವರು ಬಹಳ ಅನುಭವಿಗಳಾಗಿದ್ದು ಒಂದೆರಡು ಸ್ಥಳಗಳನ್ನು ನೋಡಿದರೆ ದೇಶದ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಅವರಿಗೆ ಅನುಭವವಿರುತ್ತದೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತುಮಕೂರು ಜಿಲ್ಲೆಗೆ ಈ ತಂಡದವರು ರಾತ್ರಿ 8 ಗಂಟೆಗೆ ಬಂದಾಗ, ನಾನು ಅವರನ್ನು ಈ ಜಿಲ್ಲೆಗೆ ಏಕೆ ಬಂದಿದ್ದೀರಿ ಎಂದು ಪ್ರಶ್ನೆ ಮಾಡಿದಾಗ ಅಭಾವ ಪರಿಸ್ಥಿತಿಯನ್ನು ತಿಳಿಯುವುದಕ್ಕೆ ಎನ್ನತಕ್ಕ ವಿಚಾರವನ್ನು ಅಷ್ಟು ಜರೂರು ಹೇಳದೆ ನಾವು ಈ ರಾಜ್ಯ ದಲ್ಲಿ ತೆರಿಗೆಯನ್ನು ಎಷ್ಟು ಹಾಕಬಹುದು ಎನ್ನುವ ವಿಚಾರವನ್ನು ಮಾತ್ರ ತಿಳಿಯುವುದಕ್ಕೆ ಬಂದಿ ದ್ದೇವೆ ಎಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರಿಂದ ಅವರು ಅಭಾವ ಪರಿ ಸ್ಥಿತಿಯನ್ನು ನಿಜವಾಗಿ ಅರಿಯುವುದಕ್ಕೆ ಬಾರದೆ ತೆರಿಗೆಗಳನ್ನು ಏನೇನು ಹಾಕಬಹುದು ಎನ್ನುವ ವಿಚಾರವನ್ನು ತಿಳಿಯುವುದಕ್ಕೆ ಮಾತ್ರ ಬಂದಿದ್ದರು ಎಂದು ಗೊತ್ತಾಗುವುದರಿಂದ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೀ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಯಾವ ಭಾಷೆಯಲ್ಲಿ ಅವರನ್ನು ಕೇಳಿದಿರೋ ?

ಶ್ರೀ ಕೆ. ಲಕ್ಕಪ್ಪ.—ಅಭಾವ ಪರಿಸ್ಥಿತಿಯನ್ನು ಚರ್ಚೆ ಮಾಡುವುದಕ್ಕೆ ಅವರು ತಯಾರಾಗಿರಲಿಲ್ಲ, ಆದರೆ ತೆರಿಗೆಯನ್ನು ಹಾಕುವುದಕ್ಕೆ ಮಾತ್ರ ಕೆಲವು ವಿಚಾರಗಳನ್ನು ತಿಳಿದುಕೊಳ್ಳುವುದಾಗಿ ಹೇಳಿದರು. ನಿಜವಾಗಿಯೂ ಕೂಡ ಮೈಸೂರು ದೇಶದ ಹಿತದೃಷ್ಟಿಯಿಂದ ಅವರು ಅಭಾವ ಪರಿಸ್ಥಿತಿಯನ್ನು ತಿಳಿದು ದೇಶದಲ್ಲಿ ಏನಾದರೂ ಕ್ಷಾಮ ಪರಿಹಾರ ಮಾಡುವುದಕ್ಕೆ ಬಂದಿದ್ದರೋ, ಅಥವಾ ತೆರಿಗೆಯನ್ನು ಜಾಸ್ತಿ ಮಾಡಿ ಅಭಾವ ಪರಿಸ್ಥಿತಿ ಇರತಕ್ಕ ಕಡೆಯ ಜನಗಳನ್ನೆಲ್ಲ ಆಹಾರವಿಲ್ಲದೆ ಸಾಯಿಸತಕ್ಕ ಪ್ರಸಂಗವನ್ನು ವಿಚಾರಣೆ ಮಾಡುವುದಕ್ಕೆ ಬಂದಿದ್ದರೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇಂದ್ರ ಸರ್ಕಾರದ ಮತ್ತು ಪ್ಲಾನಿಂಗ್ ಕಮಿಷನ್ ಅಧಿಕಾರಿಗಳು ಮೈಸೂರು ಸರ್ಕಾರದವರು ಹಾಕುವ ತೆರಿಗೆಗಳ ವಿಚಾರದಲ್ಲಿ ಅವರ ಅಭಿಪ್ರಾಯಗಳನ್ನು ಕೊಡಬೇಕಾದ ಪ್ರಮೇಯವಿಲ್ಲ. ತೆರಿಗೆ ಹಾಕಬೇಕಾದರೆ ಸರ್ಕಾರದವರೇ ಯೋಚನೆ ಮಾಡಿ ಹಾಕುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾರಡಿ ತಂಡದವರು ಪ್ರೆಸ್ ಇಂಟರ್‌ವ್ಯೂನಲ್ಲಿ ಹೇಳಿದ ವಿಚಾರಗಳು ವಾಸ್ತವಾಂಶಕ್ಕೆ ದೂರವಾಗಿರುವುದರಿಂದ ಅವರನ್ನು ಸರ್ಕಾರದವರು ಭೇಟಿ ಮಾಡಿ ಅವರು ಹೇಳಿರುವ ಅಂಶಗಳು ಸತ್ಯಕ್ಕೆ ದೂರವಾಗಿವೆ, ಅದರಿಂದ ಜನರಲ್ಲಿ ಸಂಶಯ ಬರುವ ಹಾಗಿದೆ ಎಂದು ಏನಾದರೂ ಕ್ಲಾರಿಫೈ ಮಾಡಿಕೊಂಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಬಂದು ಹೋದಕಾಲದಲ್ಲಿ ನಾವು ಜೈಪುರಕ್ಕೆ ಹೋಗಿದ್ದೆವು.

ಶ್ರೀ ಎಸ್. ಗೋಪಾಲಗೌಡ.—ಕೇಂದ್ರದಿಂದ ಇಲ್ಲಿಯ ಸ್ಥಿತಿಗತಿಗಳನ್ನು ಅಭ್ಯಸನ ಮಾಡುವುದಕ್ಕಾಗಿ ಶ್ರೀ ಯಾರ್ಡಿಯವರ ಮುಖಂಡತ್ವದಲ್ಲಿ ಇಲ್ಲಿಗೆ ಬಂದಂಥ ತಂಡದವರು ರಾಜ್ಯಕ್ಕೆ ಭೇಟಿ ಕೊಟ್ಟಾಗ ರಾಜ್ಯದ ಸಚಿವರುಗಳು ಯಾರೂ ಇಲ್ಲದೇ ಇದ್ದು ಅವರು ಅವಸರವಾಗಿ ಬಂದು ಕೆಲವು ಕಡೆಗಳಲ್ಲಿ ಮಾತ್ರ ಭೇಟಿಕೊಟ್ಟು ಬಂದಿರತಕ್ಕ ತೀರ್ಮಾನಗಳು, ಕೇವಲ 4 ಲಕ್ಷ ಜನಗಳಿಗೆ ಮಾತ್ರ ಕಷ್ಟ ಬರಬಹುದು, ಈಗ ಕೊಟ್ಟಿರತಕ್ಕ ಹಣವನ್ನು ಖರ್ಚುಮಾಡಿದರೆ ಸಾಕಾಗುತ್ತದೆ, ಸರ್ಕಾರದವರು ಕೈಕೊಂಡಿರತಕ್ಕ ರಿಲೀಫ್ ಕಾಮಗಾರಿಗಳ ಕೆಲಸದಲ್ಲಿ ಸಾಕಷ್ಟು ಉತ್ಪತ್ತಿ ಬರುತ್ತಾ ಇಲ್ಲವೆಂಬುದಾಗಿ ವರದಿಯನ್ನು ಕೊಟ್ಟಮೇಲೆ ಇದು ಸರಿಯಾದ ಅಭ್ಯಾಸವಾಗಿಲ್ಲ. ಇದನ್ನು ಪುನಃ ಪರಿಶೀಲನಬೇಕು ಎಂಬುದಾಗಿ ರಾಜ್ಯ ಸರ್ಕಾರದವರು ಪ್ಲಾನಿಂಗ್ ಕಮಿಷನ್ನಿನವರಿಗೆ ಮತ್ತು ಕೇಂದ್ರ ಸರ್ಕಾರದವರಿಗೆ ಬರೆದು ತಿಳಿಸಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀ ಯಾರ್ಡಿಯವರು ವರದಿಯನ್ನೇ ಕೊಟ್ಟಿಲ್ಲ. ಇನ್ನೂ ಆ ವರದಿಯನ್ನೇ ಕೊಡದೇ ಇರುವಾಗ ಅವರು ಎಲ್ಲೋ ಹೇಗೋ ಪತ್ರಿಕಾ ವರದಿಗಾರರೊಂದಿಗೆ ನಾಲ್ಕು ಮಾತುಗಳನ್ನು ಏನಾದರೂ ಮಾತನಾಡಿರಬಹುದು. ಆ ಒಂದು ಆಧಾರದ ಮೇಲೆ ಯಾವ ಸರ್ಕಾರವೂ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ವರದಿ ಬರುತ್ತದೆ. ಅದು ಬಂದ ಮೇಲೆ ಅವರ ಅನಸ್‌ಮೆಂಟ್ ಏನೆಂಬುದನ್ನು ನೋಡಿ ಅವರ ಅನಸ್‌ಮೆಂಟಿಗೂ ನಮ್ಮ ಅನಸ್‌ಮೆಂಟಿಗೂ ಬಹಳ ತಾರತಮ್ಯವಿದ್ದರೆ ಕೇಂದ್ರ ಸರ್ಕಾರಕ್ಕೆ ನಮ್ಮ ಪರಿಸ್ಥಿತಿಯನ್ನು ತಿಳಿಸಿ ಸಹಾಯ ಮಾಡಬೇಕೆಂದು ಕೇಳುತ್ತೇವೆ. ಅದನ್ನು ಅವರು ಮಾಡುತ್ತಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಶ್ರೀಮಾನ್ ಯಾರ್ಡಿಯವರು ಗೋರಿಬಿದನೂರಿಗೆ ಬಂದು ತುಮಕೂರು, ಕೊಳ್ಳೇಗಾಲ, ಚಿತ್ರದುರ್ಗಗಳಿಗೆ ಬಹಳ ಆತುರವಾಗಿ ಹೋಗಿ ಬರುವ ಬದಲು ಅವರನ್ನು ಅಲ್ಲಿ ನಾಲ್ಕಾರು ದಿವಸಗಳವರೆಗೂ ಇರಿಸಿಕೊಂಡು ಸುತ್ತಮುತ್ತಲಿನ ಹಳ್ಳಿಗಳ ಮೂರೆ ಮೂಲೆಗೂ ಕರೆದುಕೊಂಡು ಹೋಗಿ ತೋರಿಸುವಂತಹ ಏರ್ಪಾಡನ್ನು ಮಾಡಿದ್ದರೆ ಹೆಚ್ಚು ಪ್ರಯೋಜನವಾಗುತ್ತಿರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಅವನ್ನೆಲ್ಲಾ ನೋಡಬೇಕಾದ ಪ್ರಮೇಯವಿಲ್ಲ. ಪ್ರತಿಯೊಂದು ಜಿಲ್ಲೆಯ ಮೂಲೆಗಳಲ್ಲಿ ಹೋಗಿ ನೋಡಿ ಬರುವಂತಹ ಪ್ರಮೇಯವಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಅಂಕಿ ಅಂಶಗಳನ್ನು ಒದಗಿಸುತ್ತಾರೆ. ಅವನ್ನು ಏನೋ ಒಂದೆರಡು ಇಲ್ಲಿನ ಪರಿಸ್ಥಿತಿಯನ್ನು ನೋಡುವುದು ಅವರ ಪದ್ಧತಿ. ಆದರೆ ಊರೂರಿನ ಪ್ರತಿಯೊಂದು ತಾಲ್ಲೂಕಿಗೆ ಹಾಗೂ ಪ್ರತಿಯೊಂದು ಜಿಲ್ಲೆಗೂ ಅವರು ಹೋಗುವುದಕ್ಕಾಗುವುದಿಲ್ಲ. ಕೆಲವು ಜಿಲ್ಲೆಗಳಿಗೆ ಹೋಗಿ ಬಂದಿದ್ದಾರೆ. ಆ ರೀತಿ ಒಂದು ಜಿಲ್ಲೆಗೆ ಹೋಗಿ ಇನ್ನೊಂದು ಜಿಲ್ಲೆಗೆ ಅವರು ಹೋಗದೇ ಇರುವುದರಿಂದ, ಅದನ್ನು ಅವರೇ ನಿರ್ಧಾರ ಮಾಡುವುದರಿಂದ ಅದಕ್ಕೆ ಪ್ರತಿಯಾಗಿ ಯಾರೂ ಏನೂ ಹೇಳುವುದಕ್ಕಾಗುವುದಿಲ್ಲ. ಇಲ್ಲದೇಹೋಗಿದ್ದರೆ ಬೆಳಗಾಂಗೆ ಅವರು ಏಕೆ ಬರಲಿಲ್ಲವೆಂದು ಶ್ರೀಮಾನ್ ಮಾಗಾವಿಯವರು ಕೇಳುತ್ತಿದ್ದರು. ಹೀಗೆ ಎಲ್ಲರೂ ಅವರವರ ಜಿಲ್ಲೆಗೆ ಏಕೆ ಅವರು ಬರಲಿಲ್ಲವೆಂದು ಪ್ರಶ್ನೆ ಹಾಕುತ್ತಿದ್ದರು. ಅದೇ ರೀತಿ ಬಿಜಾಪುರದವರೂ ಕೇಳುತ್ತಾ ಇದ್ದರು. ಅದರಲ್ಲೂ ಅವರು ಬಹಳ ಇಂಟೆನ್ಸಿವ್ ಆಗಿ ಇದ್ದಿದ್ದರಲ್ಲಿ ರಾತ್ರಿ 10-11 ಘಂಟೆಯವರೆಗೂ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಹೋಗಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಶ್ರೀಮಾನ್ ಯಾರ್ಡಿ ಅವರು ಕೊಟ್ಟಿರತಕ್ಕ ಪತ್ರಿಕಾ ಹೇಳಿಕೆ ಈಗ್ಗೆ ನುಮಾರು ಒಂದೂವರೆ ತಿಂಗಳುಗಳಾದುವು. ಇನ್ನೂ ಅವರಿಂದ ವರದಿ ಬಂದಿಲ್ಲವೆಂದು ಹೇಳಿದಮೇಲೆ ಕೇಂದ್ರ ಸರ್ಕಾರಕ್ಕೆ ಆ ಬಗ್ಗೆ ನರ್ಕಾರದವರು ಪ್ರತಿಭಟನೆ ಸೂಚಿಸುವುದು ಅವರ ಕರ್ತವ್ಯವಲ್ಲವೆ ?

Mr. SPEAKER.—On what ? Is it on Press Reports ?

ಶ್ರೀ ಬಿ. ಬೈರಪ್ಪಾಜಿ.—ನಾನು ಕೇಳುವುದಿಷ್ಟೆ. ಶ್ರೀ ಯಾರ್ಡಿಯವರು ಕೇಂದ್ರ ಸರ್ಕಾರ ನೇಮಿಸಿದಂತಹ ಒಬ್ಬ ಅಧಿಕಾರಿ. ಅವರು ಕೊಟ್ಟಂಥ ಹೇಳಿಕೆ ಸತ್ಯಕ್ಕೆ ದೂರವಾಗಿದೆಯೆಂದು ತಿಳಿದುಬಂದಮೇಲೆ ಅಂತಹವರ ಹೇಳಿಕೆಯನ್ನು ಪ್ರತಿಭಟಿಸುವುದು ಮೈಸೂರು ಸರ್ಕಾರದ ಕರ್ತವ್ಯ ವಲ್ಲವೇ ? ಆ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತಿಭಟನೆ ಮಾಡುವುದು ಸರ್ಕಾರದ ಕರ್ತವ್ಯವಲ್ಲ. ಅವರೇನೋ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಅಧಿಕಾರಯುತವಾದ ವರದಿಯನ್ನು ಕೊಟ್ಟಿಲ್ಲ. ಇನ್ನೂ ಒಂದೂವರೆ ತಿಂಗಳೂ ಸಹ ಆಗಿಲ್ಲ. ಇವತ್ತಿಗೆ ಇನ್ನೂ ಒಂದು ತಿಂಗಳೂ ಸಹ ಪೂರೈಸಿಲ್ಲ. ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ. ಆದ್ದರಿಂದ ಆ ಹೇಳಿಕೆಯ ಮೇರೆ ನಾವು ಪ್ರತಿಭಟನೆ ಮಾಡುವುದಕ್ಕಾಗುವುದಿಲ್ಲ.

Sri S. RAJAGOPAL.—Is it not a fact that our officers and Government are not in a position to impress properly the exact situation obtaining in different parts of the State ?

Sri M. V. KRISHNAPPA.—Nothing has been said and nothing has been created. It was perhaps a casual observation made to the Press when the Officer was about to leave. We cannot act like immature Government. We have to act as a matured Government.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಸದಸ್ಯರು ಸೂಚಿಸಿದ ಪ್ರಕಾರ ಅವರಿಂದ ಬೇಗನೆ ವರದಿಯನ್ನು ತರಿಸಿ ಆ ವರದಿಯನ್ನು, ಈ ಆಯವ್ಯಯ ಅಧಿವೇಶನ ಮುಗಿಯುವುದರೊಳಗೆ ಈ ಸಭೆಯ ಮುಂದೆ ಮಂಡಿಸರಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಸೂಚನೆಯ ಪ್ರಕಾರ ನಾವು ಅವರಿಗೆ ಬರೆದು ವರದಿಯನ್ನು ಸಾಧ್ಯವಾದಷ್ಟು ಬೇಗ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ದೇಶದ ಅಭಾವ ಪೀಡಿತ ಪ್ರದೇಶಗಳನ್ನು ನೋಡುವುದಕ್ಕೆ ಬಂದಂಥ ಅತಿಥಿ, ಈ ಸರ್ಕಾರಕ್ಕೆ ಆ ಬಗ್ಗೆ ವರದಿಯನ್ನು ಕೊಡ ತ್ತೇನೆಂದು ಹೇಳಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ವರದಿಯನ್ನು ಕೊಡಬೇಕಾಗಿಲ್ಲ. ಕೇಂದ್ರ ಸರ್ಕಾರಕ್ಕೆ ಕೊಡುತ್ತಾರೆ. ಇಲ್ಲಿನ ಪರಿಸ್ಥಿತಿಯನ್ನು ಸಂಬಂಧಪಟ್ಟ ಆಹಾರ ಮತ್ತು ವ್ಯವಸಾಯದ ಇಲಾಖೆಗೆ ತಿಳಿಸುತ್ತಾರೆ. ಹಾಗೆ ಅವರಿಗೆ ತಿಳಿಸುವಾಗ ನಮಗೂ ಅದರ ಒಂದು ನಕಲನ್ನು ಕಳುಹಿಸುವುದು ಧರ್ಮ. ಆದರೆ ಇಲ್ಲಿಗೆ ಇನ್ನೂ ಕಳುಹಿಸಲಿಲ್ಲ. ನಾವು ಅವರಿಗೆ ಬರೆಯುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಶ್ರೀ ಯಾರ್ಡಿಯವರು ಮೈಸೂರು ಸಂಸ್ಥಾನಕ್ಕೆ ಬಂದು ಒಂದೆರಡು ಡಿಲ್ಲೆಗಳಲ್ಲಿ ಸಂಚಾರ ಮಾಡಿದಾಗ ಇಲ್ಲಿರತಕ್ಕ ಅಮೂರಾಗ್ರ ಪರಿಸ್ಥಿತಿಯನ್ನೂ ಹಾಗೂ ದೇಶದ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ, ಅಭಾವ ಪರಿಸ್ಥಿತಿ ಹೇಗಿದೆ ಎಂಬುದನ್ನೂ ನಮೂದಿಸಿ ಅವರಿಗೆ ಈ ನರ್ಕಾರದವರು ಸಲ್ಲಿಸಿದಂತಹ ಒಂದು ಮೆಮೊರ್ಯಾಂಡಂನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಅವರಿಗೆ ಅವರು ಇಲ್ಲಿಗೆ ಬಂದಾಗ ಮೆಮೊರ್ಯಾಂಡಂ ಕೊಡಬೇಕಾಗಿರಲಿಲ್ಲ. ಮೊದಲಿನಿಂದಲೂ ಕೇಂದ್ರ ಸರ್ಕಾರಕ್ಕೆ ನಮ್ಮ ದೇಶದ ಸ್ಥಿತಿಯನ್ನು ತಿಳಿಸುತ್ತಲೇ ಬಂದಿದ್ದೇವೆ. ಈಗಾಗಲೇ ಎಷ್ಟೋ ಸಾರಿ ನಮ್ಮ ದೇಶದ ಆಹಾರಾಭಾವ ಪರಿಸ್ಥಿತಿಯನ್ನೂ ಸಹ ತಿಳಿಸುತ್ತಿದ್ದೇವೆ. ಹಾಗೆ ನಾವು ತಿಳಿಸಿದಮೇಲೆ ಅವರು ಹೆಚ್ಚು ಆಹಾರವನ್ನ ನಮಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ನಿರ್ದಿಷ್ಟವಾಗಿ ಅವರ ವರದಿ ನಮಗೆ ಬಾರದೇ ಇರುವಾಗ ನಾವು ಸುಮ್ಮನೆ ಅತುರಪಟ್ಟು ಪ್ರೊಟೆಸ್ಟ್ ಮಾಡಲು ಪ್ರಯತ್ನ ಮಾಡುವುದು ನಮಗೆ ರಾಭಕರವಲ್ಲ. ಅವರ ವರದಿಯಿಂದ ನಮ್ಮ ದೇಶಕ್ಕೆ ಯಾವ್ಯಾವ ಅಂಶಗಳಿಂದ ರಾಭವಿದೆಯೋ ಅವನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರಕ್ಕೆ ಅವರು ವರದಿ ಕೊಡಲಿ ಅಥವಾ ಕೊಡದಿರಲಿ, ಮೈಸೂರು ರಾಜ್ಯ ಅತಿ ಅಭಾವ ಸ್ಥಿತಿಯಲ್ಲಿದೆ ಎಂಬುದಾಗಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕಾಗಲೀ ಅಥವಾ ಪ್ಲಾನಿಂಗ್ ಕಮಿಷನ್ನಿನವರಿಗಾಗಲೀ ತಿಳಿಸಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಾರ್ಲಮೆಂಟನಲ್ಲಿಯೇ ಈ ಬಗ್ಗೆ ಯಾವ ರೀತಿಯಲ್ಲಿ ಪ್ರಶ್ನೋತ್ತರ ಗಳು ಆಗುತ್ತಿವೆಯೆಂಬುದನ್ನು ಮಾನ್ಯ ಸದಸ್ಯರುಗಳು ಪತ್ರಿಕೆಗಳಲ್ಲಿ ನೋಡುತ್ತಾ ಇದ್ದಾರೆ. ಅಲ್ಲರುವ ಮಂತ್ರಿಗಳಿಗೂ ಹಾಗೂ ಪ್ರಧಾನ ಮಂತ್ರಿಗಳಿಗೂ ಮೈಸೂರು ರಾಜ್ಯದ ಪರಿಸ್ಥಿತಿ ಕೆಟ್ಟಿದೆ ಎಂಬುದು ಮನದಟ್ಟಾಗಿದೆ, ನವರಿಗೆಲ್ಲರಿಗೂ ಪದೇ ಪದೇ ಈ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಕೇಂದ್ರ ಸರ್ಕಾರದ ಕಡೆಯಿಂದ ಒಬ್ಬರು ಇಲ್ಲಿನ ಅಭಾವ ಪರಿಸ್ಥಿತಿಯನ್ನು ನೋಡುವುದಕ್ಕೆ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದ್ದು ಅವರಿಗೆ ಸಹಾಯ ಮಾಡಬೇಕಾದುದು ಅವರ ಕರ್ತವ್ಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂತ್ರಿಗಳು ಇರಬೇಕಾಗಿಲ್ಲ, ಸಂಬಂಧಪಟ್ಟ ಸೆಕ್ರೆಟರಿಗಳು ಇರುತ್ತಾರೆ. ಅಲ್ಲಿಂದ ಮಂತ್ರಿಗಳು ಬಂದಿದ್ದರೆ ನಾವು ಇರುತ್ತಿದ್ದೆವು. ನಮ್ಮ ಕೈಲಿ ಏನೇನು ಆಗಬೇಕೋ ಅಷ್ಟನ್ನು ಮಾಡಿದ್ದೇವೆ. ಅವರು ಕನ್‌ವಿನ್ಸ್ ಆಗಿದ್ದಾರೆ. ಯಾವುದೋ ಒಂದು ಪತ್ರಿಕಾಂಶವನ್ನು ಆಧಾರವಾಗಿಟ್ಟುಕೊಂಡು ನಮಗೆ ಬರುವ ಹಣ ಸಹಾಯವನ್ನು ಕೆಡಿಸುವುದಕ್ಕೆ ಪ್ರೊಟೆಸ್ಟ್ ಮತ್ತು ಖಂಡನೆಗಳನ್ನು ಮಾಡುವುದರಿಂದ ದೇಶಕ್ಕೆ ಉತ್ತಮವಾಗುವುದಿಲ್ಲ.

Sri A. S. PATIL.—What are the special terms of reference to this study team appointed by the Government of India ?

Mr. SPEAKER.—Only the Planning Commission has sent that officer.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರೊಬ್ಬ ಐ.ಎ.ಎಸ್. ಆಫೀಸರ್. ಈಗ ಕೇಂದ್ರದಲ್ಲಿ ಉಪ ಮಂತ್ರಿಯಾಗುವುದಕ್ಕೆ ಮತ್ತು ಆಲ್-ಇಂಡಿಯಾ ಫಿಗರ್ ಎಂದೆನಿಸಿಕೊಳ್ಳುವುದಕ್ಕೆ ಇತ್ತೀಚೆಗೆ ಈ ರೀತಿಯಲ್ಲಿ ಬರುತ್ತಾ ಇದ್ದಾರೆ. ನಮ್ಮ ಸರ್ಕಾರ ಮಾಡಿದಂತಹ ವರದಿಯ ಮೇಲೆ ಒಬ್ಬ ಐ.ಎ.ಎಸ್. ಆಫೀಸರ್‌ನ್ನು ವರದಿಯನ್ನು ಮಾಡುವುದಕ್ಕೆ ಕಳುಹಿಸಿದರೆ ಇವರ ವರದಿಯಲ್ಲಿ ಕೇಂದ್ರ ಸರ್ಕಾರಕ್ಕೆ ನಂಬಿಕೆ ಇಲ್ಲದೆ ಹೀಗೆ ಕಳುಹಿಸಿದ್ದಾರೆಂದು ಹೇಳೋಣವೇ, ಅವರು ಹಳ್ಳಿಯ ಜನರ ಬಡತನವನ್ನು ನೋಡದೆ ಇರುವಾಗ ಅವರನ್ನು ಮೈಲಗಲ್ಲು ಇರುವ ಕಡೆಗಳಲ್ಲೆಲ್ಲಾ ಕಾಲ್ನಡಗೆ ಯಲ್ಲಿ ಕರೆದುಕೊಂಡು ಬಂದಿದ್ದರೆ ನಮ್ಮ ಪರಿಸ್ಥಿತಿ ಅವರಿಗೆ ಇನ್ನೂ ಚೆನ್ನಾಗಿ ತಿಳಿದು ಅದರಿಂದ ನಮಗೆ ಒಳ್ಳೆಯದಾಗುತ್ತಿರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇಂದ್ರ ಸರ್ಕಾರದವರು ಕಾನ್‌ಫರೆನ್ಸ್ ಮತ್ತು ಸ್ಟಡಿ ಟೀಮುಗಳ ಮೂಲಕ ಪರಿಶೀಲನೆ ನಡೆಸುತ್ತಾರೆ. ಬೇಕಾದಾಗ ಎಲ್ಲಾ ಸಂಸ್ಥಾನಗಳ ಮಂತ್ರಿಗಳನ್ನು ನಮ್ಮೀಲನ ಗಳಿಗೆ ಕರೆಸಿ ಕೇಳುತ್ತಾರೆ. ಪರಿಸ್ಥಿತಿಯನ್ನು ವಿಚಾರಿಸುತ್ತಾರೆ. ಅಲ್ಲದೆ ತಾವೂ ಬಂದು ಕಣ್ಣಿನಲ್ಲಿ ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುತ್ತಾರೆ.

ಶ್ರೀ ವಿ. ಎಂ. ದೇವ್.—ನನಗೆ ಯಾರೋ ಹೇಳಿದರು. ಅವರು ನೋಡಿದ್ದು ತುಮಕೂರು ಟಿ.ಬಿ. ಎಂದು. ಸಾಮಾನ್ಯವಾಗಿ ಅವರು ಎಲ್ಲಾ ರಾಜ್ಯಗಳ ರಾಜ್ಯಭಾರವನ್ನು ನೋಡಿದ್ದಾರೆ. ಅದರ ಅನುಭವದ ಮೇಲೆ ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಬೇಕಾದಷ್ಟು ತೆರಿಗೆಯನ್ನು ಹಾಕುತ್ತಾರೆ, ಅದರಿಂದಲೇ ರಾಜ್ಯಭಾರ ಚೆನ್ನಾಗಿ ಅಲ್ಲಿ ನಡೆಯುತ್ತದೆಂದು ಹೇಳಿದ್ದಾರೆ. That officer did not have any time. Behind all the energy of that officer, only self-interest was there. The person cannot give a correct picture of the famine area. From that point of view will you take measures to write to the Centre to appoint proper persons ? ನಿಜವಾಗಿ ಅಂತಹ ವ್ಯಕ್ತಿ ಗಳನ್ನು ಅವರು ನೇಮಕ ಮಾಡಕೂಡದು. ಇವರು ಅವರ ವರದಿಯಿಂದ ಮೈಸೂರು ದೇಶಕ್ಕೆ ನ್ಯಾಯವಾಗಿ ಜಾಗ್ರತೆ ಅನುಕೂಲಮಾಡುತ್ತಾರೆಯೇ ಎಂಬುದಾಗಿ ಖಚಿತವಾಗಿ ಕೇಳುತ್ತೇನೆ.

2-00 P.M.

Sri M. V. KRISHNAPPA.—It looks as though he has seen almost all the people on the tour.

Sri V. M. DEO.—Sir, he had come only for propaganda, but not for study.

Mr. SPEAKER.—Let not the Hon'ble Member get excited.

ಶ್ರೀ ವಿ. ಎಂ. ದೇವ್.—ಅಂಥವರನ್ನು ನೇಮಕ ಮಾಡಿಕೊಂಡು ಪ್ರಾಪಗ್ಯಾಂಡ ಮಾಡಿದರೆ ದೇಶ ಏನಾದರೂ ಉಳಿಯುತ್ತದೆಯೇ, ಇಲ್ಲಿ ಕುಳಿತುಕೊಂಡು ಕೆಲಸ ಮಾಡತಕ್ಕವರಿಗೆ ಮಾನ ಉಳಿಯುತ್ತದೆಯೇ !

Mr. SPEAKER.—I am here to protect the Member's 'ಮಾನ'.

Sri V. M. DEO.—Will the Government at least now ask all the people with whom they came in contact and know the standard of this particular person and take measures to write to the Central Government to appoint some other person ?

Mr. SPEAKER.—It is disallowed. It is not correct to ask with regard to the capacity, capability, etc., of an officer who is not here to defend himself. On the other hand, he is an excellent officer. Sri Yardi does not come for the first time to the State. He is one of the ablest officers.

Sri S. R. KANTHI.—Sir, I wish to add that I know that officer for over ten years. He is impartial and a best officer.

Mr. SPEAKER.—I am almost convinced ; I think, he is a Mysorean. Question Hour is over.

QUESTIONS FOR ANSWERS ON THE DAY

(but not taken up)

Change of Title Deeds (Khata) of Lands.

*Q.—96. Sri R. N. LAKSHMIPATHI (Gowribidanur).—

Will the Government be pleased to state :—

(*a*) the number of applications received for change of title deeds (Khata) of lands in Gowribidanur Taluk for the last three years ;

(*b*) how many of them are pending disposal and since what date ?

*A.—Sri M. V. KRISHNAPPA (Minister for Revenue).—

(*a*) 1,985 cases.

(*b*) 256 cases as on 1st January 1966 of which 38 cases are pending since 1963-64, and 218 cases since 1964-65.

Changes in the Prohibition Policy.

*Q.—153. Sri A. KRISHNA SHETTY (Mangalore-II).—

Will the Government be pleased to state :—

the changes contemplated in the prohibition policy of the State ?

*A.—Sri RAMAKRISHNA HEGDE (Minister for Finance).—

No major changes of policy are contemplated. Uniform rules governing the issue of permits for possession and consumption of liquor in dry areas have been brought into force.